ಯೋಚಿಸಿರಲಿಲ್ಲ. ಏಳೆಂಟು ಪುಟಗಳಷ್ಟು ಬರೆದಿರಬೇಕು. ವ್ಯಕ್ತಿಚಿತ್ರಣವೇನೋ ಚೆನ್ನಾಗಿ ಬರುತ್ತಿದ್ದರೂ, ಅದು ಕತೆಯಾಗುವುದರಲ್ಲಿ ಸೋಲುತ್ತಿತ್ತು. ಲಲಿತೆಯ ಬದುಕಿನ ಆತ್ಮಹತ್ಯೆಯ ಸನ್ನಿವೇಶವನ್ನು ಕತೆಯ ಆರಂಭದಲ್ಲಿ ತುಸು ಅಮೂರ್ತವಾಗಿ ಸ್ತಬ್ಧಚಿತ್ರದಂತೆ ಬಿಡಿಸಿಟ್ಟೆ. ಕತೆ ಮುಗಿಯುವ ಹಂತದಲ್ಲೂ ತೊಂಬತ್ತರ ಹೊಸಿಲಲ್ಲಿದ್ದ ಲಲಿತಾಂಬೆಯು ರೈಲುಹಳಿಗಳನ್ನು ದಿಟ್ಟಿಸುತ್ತ ಹಿಂದಿನ ಆ ಘಟನೆಯನ್ನು ಮೆಲುಕುಹಾಕುವಂತೆ ಚಿತ್ರಿಸಿದೆ. ಈಗ ಕತೆಗೊಂದು ಆಕಾರ, ಆಯಾಮ ಬಂದಂತೆನಿಸಿತು. ಕತೆಯ ಹೆಸರೂ ಇದರಿಂದ ದೃಢವಾಯಿತು.

ಹೆಚ್ಚಾಗಿ ಒಂದು ಪಾತ್ರಕ್ಕೋ, ಸನ್ನಿವೇಶಕ್ಕೋ ಪೂರಕವಾಗಿ ಇನ್ನೊಂದು ಪಾತ್ರವನ್ನೋ, ಸನ್ನಿವೇಶವನ್ನೋ ರೂಪಿಸತೊಡಗುತ್ತೇನೆ. ಸಹಜವಾಗಿ ಬರುವ ಇಂತಹ ಪಾತ್ರ ಸನ್ನಿವೇಶಗಳಿಂದಾಗಿ ಮೂಲ ಪಾತ್ರದ ಸ್ವಭಾವ–ಧೋರಣೆಗಳು ಪ್ರಖರವಾಗುತ್ತವೆ ಎಂದು ನನ್ನ ಭಾವನೆ. ಇನ್ನು ಸಂಭಾಷಣೆಗಳಲ್ಲೇ ಕತೆಯನ್ನು ಹೆಣೆಯುವುದರಲ್ಲಿ ನನಗೆ ಉಮೇದು. ಬೇರೆ ಬೇರೆ ಪಾತ್ರಗಳ ಬಾಯಲ್ಲಿ ಬರುವ ಮಾತುಗಳ ಮೂಲಕವೇ ಕತೆಯ ಅನಾವರಣವಾಗುತ್ತ ಹೋಗುವುದರಲ್ಲಿ ಏನೋ ನೈಜತೆ ಇದೆ, ಅದಕ್ಕೊಂದು ಅಧಿಕೃತತೆ ಮೂಡುತ್ತದೆ ಎಂದನಿಸುತ್ತದೆ.

ಕಾಲ, ದೇಶಗಳೂ ನನಗೆ ಮುಖ್ಯ. ಕತೆಯ ನಡುವೆ ಅದು ನಡೆಯುವ ಕಾಲದ ಬಗ್ಗೆ ಒಂದು ಮಾತಾದರೂ ನುಸುಳಿಯೇ ನುಸುಳಬೇಕು. 'ಎರಡನೆಯ ಮಹಾಯುದ್ಧ ಮುಗಿದಿತ್ತಷ್ಟೇ...' 'ಇಪ್ಪತ್ತನೇ ಶತಮಾನದ ಎಪ್ಪತ್ತರ ದಶಕದಲ್ಲಿ ತಮ್ಮ ಸುಧಾರಿತ ಬಂಧುವರ್ಗದಲ್ಲಿ ಯಾರೂ ಇಂಥದ್ದೊಂದನ್ನು ನಿರೀಕ್ಷಿಸಿರಲಿಲ್ಲ.' ಇನ್ನು ಸೀಮಿತ ಶಬ್ದಗಳಲ್ಲೇ ಆದರೂ ಕತೆ ನಡೆಯುವ ಸ್ಥಳದ ಬಗ್ಗೆ ಹೇಳದಿದ್ದರೆ ಮನಸ್ಸು ಕೇಳದು. 'ದಹಿಸರ್ ಎಂದರೆ ಮುಂಬಯಿಯ ಉತ್ತರದ ತುತ್ತತುದಿಗಿಂತಲೂ ಹೊರಗಿರುವ ಉಪನಗರ', 'ಓ ಐನೂರು ಅಂತ ದೂರದ ಊರೇನಲ್ಲ, ಮಂಗಳೂರಿನಿಂದ ಹತ್ತೇ ಮೈಲು...'

ಪಾತ್ರಗಳ ಬಗ್ಗೆ ಬರೆಯುವಾಗ ಸ್ಥೂಲವಾಗಿ ಅಲ್ಲದಿದ್ದರೂ, ತುಸುವಾದರೂ ಅವರ ರೂಪು–ರೇಷೆಗಳನ್ನು ಬಣ್ಣಿಸುವುದೆಂದರೆ ನನಗೆ ಇಷ್ಟ. ನನ್ನ ವಿಸ್ತೃತವಾದ ಓದಿನಲ್ಲಿ, ದೇಶವಿದೇಶಗಳ ಸಶಕ್ತ ಬರಹಗಾರರು ಕಣ್ಣೆದುರು ಬಂದು ನಿಲ್ಲುವಂತೆ ಪಾತ್ರಗಳನ್ನು ಸೃಷ್ಟಿಸುವುದನ್ನು ನಾನು ಯಾವಾಗಲೂ ಮೆಚ್ಚಿದವಳು. 'ತುಸುವೇ ಉಬ್ಬು ಹಲ್ಲಿದ್ದ ಅವಳ ಮುಖದಲ್ಲಿ ನಗೆ ಕಮ್ಮಿ,' 'ಸಳಸಳ ಮೈಕಟ್ಟು, ಮಾತಾಡಿದರೆ ಸುರುಳಿ ಸುರುಳಿಯಾಗಿ ಬೆಳ್ಳಿಯ ಗೆರೆಗಳು ಹರಡಿದಂತೆ,' 'ತೆಳ್ಳಗೆ, ಬೆಳ್ಳಗೆ, ಕೋಲುಮುಖದ ಪಾರಕ್ಕ,' 'ಚೂಂಟಿದಂತಹ ಹಣೆ, ಒಂದು ಬದಿ ಸ್ವಲ್ಪ ಜಪ್ಪಿಟ್ಟಂತಿರುವ ಕೆನ್ನೆ, ಮುಖಕ್ಕಿಡೀ ಎದ್ದು ಕಾಣುವ ಪೆದ್ದುಕಳೆಯ ಉರುಟು ಕಣ್ಣಬೋಳೆಗಳು.'

ಎಲ್ಲಿಯೂ ಯಾವುದೇ ಧೋರಣೆಗಳ ಬಗ್ಗೆಯಾಗಲೀ, ಸಮಸ್ಯೆಗಳ ಬಗ್ಗೆಯಾಗಲೀ ವಾಚ್ಯವಾಗಿ ಹೇಳದೆ, ಪಾತ್ರಗಳ ಮಾತುಗಳಲ್ಲಿ, ಸಂದರ್ಭಗಳ ಮೂಲಕ ಸಹಜವಾಗಿ ಬರಬೇಕೆಂಬ ತುಡಿತ ಒಂದು ಕಡೆಯಾದರೆ, ಯಾವುದೇ ಸನ್ನಿವೇಶವೂ ತೀರ ಅವಾಸ್ತವಿಕವಾಗಿ, ಎಳೆದು ತಂದಂತೆ ಬರಬಾರದೆನ್ನುವುದರ ಕಡೆಗೆ ಗಮನ ಇನ್ನೊಂದು ಕಡೆ. ಬಹಳ ಹಿಂದೆ ಬರೆದ 'ಹಕ್ಕಿ ಮತ್ತು ಅವಳು' ಕತೆಯಲ್ಲಿ ಹೀಗೆ ಒಳಗಿನ ಸಂವೇದನೆ ಮತ್ತು ಹೊರಗಿನ ಘಟನೆಗಳು ತಾಕಲಾಡುತ್ತ ಹೋಗುತ್ತವೆ. ಹಕ್ಕಿ ಮತ್ತು 'ಅವಳ' ನಡುವಿನ ಕಾಲ್ಪನಿಕ ಮಾತುಕತೆಗಳನ್ನು ಹೆಣೆಯುತ್ತ ಹಕ್ಕಿಯನ್ನು ಮೆಚ್ಚಿಕೊಂಡ 'ಅವಳ'ಲ್ಲಿರುವ ಹೆಣ್ಣಿಗೆ ಸಹಜವಾದ ಆಕಾಂಕ್ಷೆ–ಅಸಮಾಧಾನಗಳನ್ನು ವಾಚ್ಯವಾಗಿ ಹೇಳದೆ, ಸೂಕ್ಷ್ಮವಾಗಿ ಧ್ವನಿಸಲು ಯತ್ನಿಸಿದ್ದೇನೆ.